# ಅಭ್ಯರ್ಥಿಗಳಿಗೆ ಪ್ರಮುಖ ಸೂಚನೆಗಳು

- ಆನ್‌ಲೈನ್ ಅರ್ಜಿ ಭರ್ತಿಮಾಡುವ ಹಂತಗಳು, ವಿವರಣಾ ಪುಸ್ತಕ, ಶುಲ್ಕ ಪಾವತಿಸುವ ವಿಧಾನ ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿ.ಇ.ಟಿ) ಮಾದರಿ ಪ್ರಶ್ನೆಪತ್ರಿಕೆಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್ : www.ksoumysore.karnataka.gov.in ನಲ್ಲಿ ಲಭ್ಯವಿರುತ್ತದೆ.
- ಬೋಧನಾ ಸಾಮಗ್ರಿ ಹಾಗೂ ಗುರುತಿನ ಚೀಟಿಯನ್ನು ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರದಲ್ಲಿ ವಿತರಿಸಲಾಗುವುದು.

**ಶಿಕ್ಷಣ ಮಾಧ್ಯಮ:**

- ಬಿ.ಇಡಿ - ಶಿಕ್ಷಣ ಮಾಧ್ಯಮವು ಕನ್ನಡ / ಇಂಗ್ಲೀಷ್‌ನಲ್ಲಿರುವುದು ; ಪರೀಕ್ಷೆಯನ್ನು ಕನ್ನಡ / ಇಂಗ್ಲೀಷ್‌ನಲ್ಲಿ ಬರೆಯಬಹುದು.
- ಎಂ.ಬಿ.ಎ - ಶಿಕ್ಷಣ ಮಾಧ್ಯಮ ಮತ್ತು ಪರೀಕ್ಷೆ ಇಂಗ್ಲೀಷ್‌ನಲ್ಲಿ ಇರಲಿದೆ
- ಎಂ.ಎಸ್ಸಿ ಕಾರ್ಯಕ್ರಮಗಳು - ಶಿಕ್ಷಣ ಮಾಧ್ಯಮ ಮತ್ತು ಪರೀಕ್ಷೆ ಇಂಗ್ಲೀಷ್‌ನಲ್ಲಿ ಇರಲಿದೆ
- ಎಂ.ಎ ಉರ್ದು - ಶಿಕ್ಷಣ ಮಾಧ್ಯಮವು ಉರ್ದುವಿನಲ್ಲಿ ಇರಲಿದೆ.

- ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶತಿ ಹೊಂದುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಸರ್ಕಾರವು ನಿಗಧಿಪಡಿಸಿರುವ ಸಂಬಂಧಿತ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಆನ್‌ಲೈನ್ ಸಂಖ್ಯೆಯೊಂದಿಗೆ ದಾಖಲಾತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸದರಿ ಪೋರ್ಟಲ್ ಒಂದು ವೇಳೆ ತೆರೆಯದೇ ಇದ್ದಲ್ಲಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಂತಹ ಪ.ಜಾ / ಪ.ಪಂ ವಿದ್ಯಾರ್ಥಿಗಳು ಕಡ್ಡಾಯ ಶುಲ್ಕವಾದ ರೂ. ೮೦೦/-ಗಳನ್ನು ಮಾತ್ರ ಪಾವತಿಸಿ ಇತರೆ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ತಾತ್ಕಾಲಿಕ ಪ್ರವೇಶಾತಿ ಪಡೆಯಬಹುದಾಗಿದೆ. ಈ ವಿದ್ಯಾರ್ಥಿಗಳು ಸದರಿ ಪೋರ್ಟಲ್ ತೆರೆಯುತ್ತಿದ್ದಂತೆಯೇ ನೋಂದಾಯಿಸಿಕೊಂಡು ಆನ್‌ಲೈನ್ ನೋಂದಣಿ ಸಂಖ್ಯೆಯನ್ನು ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸುವುದು.
- 2013-14 ಮತ್ತು 2014-15ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕ / ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಹೊಂದಿ, ಪೂರ್ಣಗೊಳಿಸಿರದ ಅಥವಾ ಉತ್ತೀರ್ಣರಾಗದ ಆಸಕ್ತ ವಿದ್ಯಾರ್ಥಿಗಳಿಗೆ 2018-19ನೇ ಶೈಕ್ಷಣಿಕ ಸಾಲಿನಲ್ಲಿ ಮೊದಲ ವರ್ಷದ ಸ್ನಾತಕ / ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಕಲ್ಪಿಸಲಾಗಿದೆ. ಕರಾಮುವಿ ನಡೆಸುತ್ತಿದ್ದ ಇನ್‌ಹೌಸ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಇಂತಹ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದು ಬೋಧನಾ ಶುಲ್ಕದಲ್ಲಿ ಮಾತ್ರ ಶೇಕಡ 50% ವಿನಾಯಿತಿಯನ್ನು ಪಡೆಯಬಹುದಾಗಿದೆ (ಶುಲ್ಕದ ವಿವರಗಳಿಗಾಗಿ ವಿವರಣಾ ಪುಸ್ತಕವನ್ನು ಗಮನಿಸುವುದು).
- ಕರಾಮುವಿಯು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ವಿಶ್ವವಿದ್ಯಾನಿಲಯದ ಪರವಾಗಿ ಕಾರ್ಯನಿರ್ವಹಿಸಲು ಅಧಿಕಾರ ನೀಡಿರುವುದಿಲ್ಲ. ಅಂತಹ ಯಾವುದೇ ಬಾಹ್ಯ ವ್ಯಕ್ತಿಗಳ ವತಿಯಿಂದ ಅಭ್ಯರ್ಥಿಗಳು ನಷ್ಟಕೊಳ್ಳಗಾದಲ್ಲಿ ಅದಕ್ಕೆ ಯಾವುದೇ ರೀತಿಯಲ್ಲಿ ವಿಶ್ವವಿದ್ಯಾನಿಲಯವು ಹೊಣೆಯಾಗುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕರಾಮುವಿ ಕೇಂದ್ರ ಕಛೇರಿ ಮೈಸೂರು ಅಥವಾ ಅಧಿಕೃತ ಪ್ರಾದೇಶಿಕ ಕೇಂದ್ರಗಳನ್ನು ಮಾತ್ರ ಸಂಪರ್ಕಿಸುವಂತೆ ತಿಳಿಸಿದೆ.
- ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಪ್ರವೇಶಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ಆನ್‌ಲೈನ್ ಅರ್ಜಿಗಳನ್ನು ಪ್ರಿಂಟ್‌ತೆಗೆದುಕೊಳ್ಳುವುದು.
- ಅಂತಹ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳನ್ನು ಮತ್ತು ಈ ಆನ್‌ಲೈನ್ ಪ್ರಿಂಟ್ ಅರ್ಜಿಗಳನ್ನು ಪ್ರವೇಶಾತಿ ಪರಿಶೀಲನೆಯ ಸಮಯದಲ್ಲಿ ತಪ್ಪದೇ ತರುವುದು.
- ಪ್ರತಿಯೊಂದು ಕಾರ್ಯಕ್ರಮದ ಶುಲ್ಕವಿವರಗಳು ಮತ್ತು ವಿವರಣಾ ಪುಸ್ತಕಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ದೊರೆಯುತ್ತದೆ.
- ಯಾವುದೇ ಕೋರ್ಸ್‌ಗಳಿಗೆ ನಿಗದಿತ ಸಂಖ್ಯೆಯ ಅಭ್ಯರ್ಥಿಗಳು ಪ್ರವೇಶ ಪಡೆಯದಿದ್ದಲ್ಲಿ, ಅಂತಹ ಕೋರ್ಸ್‌ಗಳ ಪ್ರವೇಶಾತಿಯನ್ನು ರದ್ದು ಪಡಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ.

**ಬಿ.ಇಡಿ ಹಾಗೂ ಎಂ.ಬಿ.ಎ. ವಿದ್ಯಾರ್ಥಿಗಳ ವಿಶೇಷ ಗಮನಕ್ಕೆ**

- ಬಿ.ಇಡಿ. ಮತ್ತು ಎಂ.ಬಿ.ಎ ಅಭ್ಯರ್ಥಿಗಳು ಕಡ್ಡಾಯವಾಗಿ ಸಾಮಾನ್ಯ ಪ್ರವೇಶಾತಿ ಪರೀಕ್ಷೆಗೆ ಹಾಜರಾಗತಕ್ಕದ್ದು.
- ಬಿ.ಇಡಿ ಮತ್ತು ಎಂ.ಬಿ.ಎ ಅಭ್ಯರ್ಥಿಗಳು ಆನ್ ಲೈನ್ ಪೇಮೆಂಟ್ ವಿಧಾನದ ಮೂಲಕ ರೂ. 1,000/- ಗಳನ್ನು ಸಾಮಾನ್ಯ ಪ್ರವೇಶಾತಿ ಪರೀಕ್ಷೆಗಾಗಿ ಪಾವತಿಸಬೇಕು.
- ಬಿ.ಇಡಿ ಹಾಗೂ ಎಂ.ಬಿ.ಎ. ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಮುಂದೆ ನಮೂದಿಸಿರುವ ಯಾವುದಾದರು ಒಂದು ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವುದು : ಮೈಸೂರು, ಬೆಂಗಳೂರು, ತುಮಕೂರು, ಹಾಸನ, ಶಿವಮೊಗ್ಗ, ಬಳ್ಳಾರಿ, ಗುಲ್ಬರ್ಗಾ, ಧಾರವಾಡ, ಉಡುಪಿ, ಮಂಗಳೂರು

- ಸಾಮಾನ್ಯ ಪ್ರವೇಶ ಪರೀಕ್ಷೆ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಪ್ರಿಂಟ್ / ಡೌನ್‌ಲೋಡ್ ಮಾಡಿಕೊಳ್ಳಬಹುದು.
- ಬಿ.ಇಡಿ ಮತ್ತು ಎಂ.ಬಿ.ಎ. ಅಭ್ಯರ್ಥಿಗಳು ಪ್ರವೇಶ ಪ್ರಕ್ರಿಯೆ ಮುಗಿಯುವವರೆಗೆ ಆನ್‌ಲೈನ್ ನೋಂದಣಿ ಸಮಯದಲ್ಲಿ ಪಡೆದ ಪಾಸ್‌ವರ್ಡ್‌ನ್ನು ಕಾಪಾಡಿಕೊಳ್ಳುವುದು.
- ದಾಖಲಾತಿಗಳ ಅಂತಿಮ ಪರಿಶೀಲನೆ ನಂತರ ಬಿ.ಇಡಿ ಮತ್ತು ಎಂ.ಬಿ.ಎ ಅಭ್ಯರ್ಥಿಗಳ ಅಂತಿಮ ಪ್ರವೇಶ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
- ಸಾಮಾನ್ಯ ಪರೀಕ್ಷೆಯ ಪರೀಕ್ಷಾ ಕೇಂದ್ರಗಳನ್ನು ಅಗತ್ಯಕ್ಕೆ ತಕ್ಕಂತೆ ಬದಲಾವಣೆಮಾಡಲು ವಿಶ್ವವಿದ್ಯಾನಿಲಯವು ಹಕ್ಕನ್ನು ಹೊಂದಿರುತ್ತದೆ.
- ಆಯ್ಕೆಗೊಂಡ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಯನ್ನು ಪ್ರವೇಶಾತಿ ಪೂರ್ವದಲ್ಲಿ ಮಾಡಲಾಗುವುದು.
- ಎಂ.ಬಿ.ಎ. ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆ ಫಲಿತಾಂಶ ಪ್ರಕಟಣೆಯ ನಂತರ, ಪ್ರವೇಶಾತಿ ಸಮಾಲೋಚನೆ ಮತ್ತು ದಾಖಲಾತಿಗಳ ಪರಿಶೀಲನೆಗಾಗಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಥವಾ ಇತರ ಪ್ರಾದೇಶಿಕಕೇಂದ್ರಗಳಲ್ಲಿ ಮೂಲ ದಾಖಲೆಗಳು ಮತ್ತು ಮುದ್ರಿತ ಆನ್‌ಲೈನ್ ಅರ್ಜಿಯೊಂದಿಗೆ ಹಾಜರಾಗಬೇಕು.
- ಆಯ್ಕೆಯಾದ ಬಿ.ಇಡಿ ಅಭ್ಯರ್ಥಿಗಳು ಪ್ರವೇಶಾತಿ ಸಮಾಲೋಚನೆ ಮತ್ತು ದಾಖಲಾತಿಗಳ ಪರಿಶೀಲನೆಗಾಗಿ **ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು**, ಇಲ್ಲಿಗೆ ಬರತಕ್ಕದ್ದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಅಂತಿಮ ಪ್ರವೇಶಾತಿ ಪ್ರಕ್ರಿಯೆಯನ್ನು ಮಾಡಲು ವಿಶ್ವವಿದ್ಯಾನಿಲಯವು ಇಂಟರ್‌ನೆಟ್ ವ್ಯವಸ್ಥೆಯನ್ನು ನೀಡುತ್ತದೆ.
- ಅಭ್ಯರ್ಥಿಗಳು ನವೀಕರಣಗಳನ್ನು ತಿಳಿಯಲು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ಅನ್ನು ಮಾತ್ರ ನೋಡುವುದು.
- ಪರಿಶೀಲನಾ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಅಭ್ಯರ್ಥಿಗಳ ಹೆಸರುಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
- ಹನ್ನೆರಡು (12) ವರ್ಷಗಳ ಶಾಲೆಯ ಅಧ್ಯಯನ ಮತ್ತು ಕನಿಷ್ಠ ಮೂರುವರ್ಷಗಳ ಪದವಿಯನ್ನು ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಹೊಂದಿರುವ ಅಭ್ಯರ್ಥಿಗಳು ಪ್ರವೇಶಾತಿಗೆ ಅರ್ಹರಿರುತ್ತಾರೆ.

******************